# ಸಮಷ್ಟಿಪ್ರಜ್ಞೆಯ ಆಯಾಮದಲ್ಲಿ ವ್ಯಕ್ತಿವಿಕಾಸ –ಸ್ವಾಮಿ ವಿವೇಕಾನಂದರ ಜೀವನ ಸಂದೇಶ

ಜಿ.ಎಸ್. ಜಯದೇವ

ಸ್ವಾಮಿ ವಿವೇಕಾನಂದರು ಭಾರತೀಯ ಸಂಸ್ಕೃತಿಯ ಕ್ರಿಯಾಶೀಲ ಪ್ರತಿನಿಧಿಯಾಗಿ ನಮ್ಮ ಮುಂದೆ ನಿಲ್ಲುತ್ತಾರೆ ಎನ್ನುವ ಶ್ರೀ ಜಯದೇವ ಅವರು "ದೀನಬಂಧು", "ಶಕ್ತಿಧಾಮ" ಮುಂತಾದ ಸಂಸ್ಥೆಗಳ ಮೂಲಕ ತಮ್ಮನ್ನು ಸಮಾಜಸೇವಾಕಾರ್ಯದಲ್ಲಿ ತೊಡಗಿಸಿಕೊಂಡಿರುವರು.

## ವ್ಯಷ್ಟಿ-ಸಮಷ್ಟಿಗಳ ಸಂಬಂಧ

**ಜೀ**ವನದ ಪರಮೋಚ್ಚ ಆದರ್ಶ ಯಾವುದು ಎಂದು ತಿಳಿದ ಮೇಲೆ ವ್ಯಕ್ತಿ ತನ್ನ ಜೀವನವನ್ನು ತಾನೇ ರೂಪಿಸಿಕೊಳ್ಳುತ್ತಾನೆ. ವ್ಯಕ್ತಿಯೊಬ್ಬ ಪ್ರತ್ಯೇಕ ವ್ಯಕ್ತಿಯೆಂಬಂತೆ ಬದುಕಿದರೂ ಅವನು ಸೃಷ್ಟಿಯ ಒಂದು ಅಲೆ ಮಾತ್ರ. ಆದರೂ ವ್ಯಕ್ತಿಗೆ ತನ್ನ ವೈಯಕ್ತಿಕ ಬದುಕು, ಸಾಧಿಸುವ ಗುರಿ, ಪಡೆಯುವ ಅನುಭವಗಳು ವಿಶಿಷ್ಟವಾಗಿ ವ್ಯಷ್ಟಿಯ ಸರಾಸರಿ ಅನುಭವಕ್ಕಿಂತ ಭಿನ್ನವಾಗಿ ಇರಬೇಕಾದುದು ಅನಿವಾರ್ಯ. ವ್ಯಕ್ತಿಯು ತನ್ನ ವ್ಯಷ್ಟಿ ವಿಶಿಷ್ಟತೆಯನ್ನು ಕಾಯ್ದುಕೊಂಡರೂ ಆ ವಿಶಿಷ್ಟತೆ ಅವನಿಗೆ ದತ್ತವಾಗಿ ಬಂದದ್ದು ಸಮಷ್ಟಿಯ ಸುಪ್ತ ಆಕರಗಳಿಂದ. ಆದ್ದರಿಂದ ವ್ಯಕ್ತಿಯ ಬದುಕು ವೈಯಕ್ತಿಕವಾಗಿ ಎಷ್ಟು ಮುಖ್ಯವೋ ಹಾಗೆಯೇ ಅವನು ಸಮಷ್ಟಿ ಪ್ರಜ್ಞೆಗೆ ಅಧೀನವಾಗಿ ಸ್ಪಂದಿಸುವ ತೆರೆದ ಮನವುಳ್ಳವನಾಗಿರುವುದು ಅಷ್ಟೇ ಮುಖ್ಯ. ಈ ದ್ವಂದ್ವಮಯ ಪರಿಸ್ಥಿತಿ ಎಲ್ಲ ಪ್ರಜ್ಞಾವಂತ ವ್ಯಕ್ತಿತ್ವಗಳನ್ನೂ ಕಾಡುವುದುಂಟು.



ನಮ್ಮ ದೇಹಗಳು ದ್ರವ್ಯಸಾಗರದ ಸಣ್ಣ ಸಣ್ಣ ಸುಳಿಗಳು.... ಸೂರ್ಯ, ಚಂದ್ರ, ತಾರೆಗಳು ನೀವು ಮತ್ತು ನಾನು ಎಲ್ಲರೂ ವಿವಿಧ ಸುಳಿಗಳು... ನನ್ನ ಮನಸ್ಸೂ ಕೂಡ ಚಿತ್ತಸಾಗರದ ಒಂದು ಸುಳಿ ಅಷ್ಟೆ. —ಸ್ವಾಮಿ ವಿವೇಕಾನಂದ.

ಸ್ವಾಮಿ ವಿವೇಕಾನಂದರಂತಹ ಧೀಮಂತ ವ್ಯಕ್ತಿ, ವ್ಯಕ್ತಿಗತವಾಗಿ ಒಬ್ಬ ಮನುಷ್ಯ ಪಡೆಯಬಹುದಾದ ಪರಮೋಚ್ಚ ಸತ್ಯದ ಅನುಭವವನ್ನು ಪಡೆದರಾದರೂ ಅದು ಅಖಂಡ ಸಮಷ್ಟಿ ಪ್ರಜ್ಞೆಯ, ಸಮಷ್ಟಿ ಸಮುಚ್ಚಯದ, ತೀವ್ರ ಅಭಿಲಾಷೆಯ ಶಿಖರ ಎಂಬುದನ್ನು ತಮ್ಮ ಜೀವನದ ಮೂಲಕ ತೋರಿಸಿದರು. ಆದ್ದರಿಂದ ವ್ಯಕ್ತಿಯೊಬ್ಬ ಸತ್ಯಶೋಧಕನಾಗಿ ವಿಕಾಸಹೊಂದುವಾಗ ತನ್ನ ಯಾವ ಸಮುದಾಯ ಸಮಷ್ಟಿಯಾಗಿದೆಯೋ ಅದರ ವಾಸ್ತವತೆಗಳಿಗೂ ಸ್ಪಂದಿಸಿ ಇಂತಹ ಸಮಷ್ಟಿಪ್ರಜ್ಞೆಯಲ್ಲಿ ತನ್ನ ವೈಯಕ್ತಿಕ ವಿಕಾಸವನ್ನು ಸಾಧಿಸುತ್ತಾನೆ ಎಂಬುದನ್ನು ಸ್ಪಷ್ಟವಾಗಿ ತಮ್ಮ ಜೀವನದ ಸಂದೇಶವಾಗಿ ನಮ್ಮ ಮುಂದೆ ಇಟ್ಟರು.

ಸಮಷ್ಟಿ ಎಂಬುದು ಅನೇಕ ವ್ಯಕ್ತಿನಿಷ್ಠ ಅಸ್ತಿತ್ವದ ಸಮೂಹ ಅಭಿವ್ಯಕ್ತಿ. ಇವೆರಡರ ನಡುವೆ ಪರಮಸತ್ಯ ಯಾವುದು, ಎಂಬ ಪ್ರಶ್ನೆ ಅಷ್ಟು ಪ್ರಧಾನವಲ್ಲ. ಸಚೇತನವಾದ ಎಲ್ಲ ಅಸ್ತಿತ್ವದಲ್ಲೂ ವ್ಯಷ್ಟಿ-ಸಮಷ್ಟಿಗಳ ಬೆಸುಗೆ ಒಂದಕ್ಕೊಂದು ಪೂರಕವಾಗಿ ಅವಿಭಾಜ್ಯವಾಗಿದೆ. ಎರಡರ ನಡುವೆ ಎಳೆಯಬಹುದಾದ ಯಾವುದೇ ಸೀಮಾರೇಖೆಯು ಮನಸ್ಸಿನ ಒಡಕನ್ನು ಸೂಚಿಸುತ್ತದೆಯೇ ಹೊರತು ಎರಡರ ಭಿನ್ನತೆಯನ್ನಲ್ಲ.

ಉದಾಹರಣೆಗೆ ಸಜೀವಿಗಳನ್ನೇ ತೆಗೆದುಕೊಳ್ಳಿ. ಅನೇಕ ಜೀವಕೋಶಗಳ ಬೆಸುಗೆಯಿಂದ ಒಂದು ಜೀವಿ ಉತ್ಪತ್ತಿಯಾಗುತ್ತದೆ. ಕೆಳವರ್ಗದ ಸ್ಪಾಂಜ್ ಪ್ರಾಣಿಗಳಲ್ಲಿ ಈ ಜೀವಕೋಶಗಳನ್ನು ಬೇರೆಮಾಡಿದರೂ ಜೀವಕೋಶಗಳು ಸಾಯುವುದಿಲ್ಲ. ಅವನ್ನು ನೀರಿನಲ್ಲಿ ಇಟ್ಟರೆ ಕೆಲವು ಕಾಲದ ನಂತರ ಪುನಃ ಒಂದುಗೂಡಿ ಸ್ಪಾಂಜ್ ಪ್ರಾಣಿಯಾಗಿ ಬಿಡುತ್ತವೆ. ಆದರೆ ವಿಕಾಸದ ಹಂತದಲ್ಲಿ ಮೇಲೇರಿದಂತೆಲ್ಲಾ ಮುಂದುವರಿದ ಪ್ರಾಣಿಗಳ ಜೀವಕೋಶಗಳು ಬಿಡಿಸಲಾಗದ ಅವಲಂಬನೆಗೆ ಒಳಗಾಗುತ್ತವೆ. ಈ ಜೀವಕೋಶಗಳು ರಚನಾತ್ಮಕವಾಗಿ ವೈಯಕ್ತಿಕ ನೆಲೆಗಟ್ಟನ್ನು ಕಾಯ್ದುಕೊಂಡರೂ ಸಮಷ್ಟಿಗೆ ಎಂದರೆ ಇಡೀ ಜೀವಿಯ ಅಭಿವ್ಯಕ್ತಿಗೆ ಪೂರಕವಾದ ಅಸ್ತಿತ್ವವನ್ನು ಮಾತ್ರ ತೋರಬಲ್ಲವು. ಆದರೂ ಸೂಕ್ಷ್ಮದರ್ಶಕದಲ್ಲಿ ನೋಡುವ ವಿಜ್ಞಾನಿಗೆ ಅವುಗಳ ವ್ಯಕ್ತಿನಿಷ್ಠ ಅಸ್ತಿತ್ವವನ್ನು ನಿರಾಕರಿಸಲು ಸಾಧ್ಯವಿಲ್ಲ.

ಸಂಘಜೀವನ ನಡೆಸುವ ಪ್ರಾಣಿಗಳಾದ ಇರುವೆ, ಜೇನ್ನೊಣ,

ಗೆದ್ದಲು ಮುಂತಾದ ಪ್ರಾಣಿಗಳಲ್ಲಿ ಕುಟುಂಬದ ಸದಸ್ಯರೆಲ್ಲರೂ ತಮ್ಮ ಸಂತತಿ ಮುಂದುವರೆಯಲು ಕುಟುಂಬದ ಸಮಗ್ರ ಹಿತಕ್ಕಾಗಿ ದುಡಿಯುವುದನ್ನು ನೋಡುತ್ತೇವೆ. ಇಲ್ಲಿ ಅನೇಕ ಜೀವಿಗಳು ಒಟ್ಟಿಗೆ ಒಂದು ಬೃಹತ್ ಜೀವಿಯ ಬಿಡಿ ಅಂಗಗಳು ಎಂಬಂತೆ ಜೀವಿಸುತ್ತವೆ.

### ವ್ಯಷ್ಟಿವಿಕಾಸಕ್ಕೆ ಸಮಷ್ಟಿ ಪ್ರಜ್ಞೆ ಅಗತ್ಯ

ಆದರೆ ಮನುಷ್ಯನಂತಹ ಬುದ್ಧಿಜೀವಿಯ ಸಮಾಜ ಮೇಲಿನ ಎಲ್ಲ ಬಗೆಯ ಪ್ರಕ್ರಿಯೆಗಳನ್ನು ಒಳಗೊಂಡಿದ್ದರೂ ಅದಕ್ಕಿಂತಲೂ ಭಿನ್ನವಾದ ವ್ಯಕ್ತಿನಿಷ್ಠ ಅಸ್ತಿತ್ವವನ್ನು ಸಮಷ್ಟಿಪ್ರಜ್ಞೆಯಲ್ಲಿ ಸಮರ್ಥಿಸಿ ವ್ಯಕ್ತಿನಿಷ್ಠ ಉನ್ನತಿಯನ್ನು ಸಮಷ್ಟಿಯ ಉನ್ನತಿಯಾಗಿ ವಿಸ್ತರಿಸುತ್ತದೆ. ಜೀವಕೋಶಗಳಿಂದ ದೇಹ ಉತ್ಪತ್ತಿಯಾಗಿದ್ದರೂ ಜೀವಕೋಶಗಳು ಬಯಸುವ ಅಭಿವ್ಯಕ್ತಿ ಸಾಧ್ಯವಾದದ್ದು ಅವೆಲ್ಲ ಸಾಮೂಹಿಕವಾಗಿ ತಮ್ಮ ಪರಿಮಿತ ಚೌಕಟ್ಟಿನ ಹೊರಗೆ ಒಂದು ಉದ್ದೇಶವನ್ನು ಸಂಕಲ್ಪಿಸಿ ಕೆಲಸ ನಿರ್ವಹಿಸಿದಾಗ. ಮೇಲಾಗಿ ಈ ಜೀವಕೋಶಗಳೆಲ್ಲ ಬಂದದ್ದು ಒಂದು ಮೂಲ ಜೀವಕೋಶದ ವಿದಳನದಿಂದ ಎಂಬುದನ್ನು ಗಮನಿಸಬೇಕು. ಹಾಗೆಯೇ ವ್ಯಷ್ಟಿಯಿಂದ ಕೂಡಿದ ಜಗತ್ತು ಅಥವಾ ಮಾನವಜನಾಂಗ ತನ್ನ ಪರಿಪೂರ್ಣತೆಯನ್ನು ಪಡೆಯಬೇಕಾದರೆ ತನ್ನ ವ್ಯಷ್ಟಿನಿಷ್ಠ ಚೌಕಟ್ಟಿನ ಹೊರಗೆ ಸಮಷ್ಟಿವ್ಯಾಪ್ತಿಯಲ್ಲಿ ಅರಳಬಹುದಾದ ಕನಸನ್ನು ಕಂಡಾಗ ಮಾತ್ರ. ಈ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರ ಒಂದು ಮಾತು ನೆನಪಿಗೆ ಬರುತ್ತದೆ.

"ಭಗವಂತನ ಕೇವಲ ಅಖಂಡತೆಯನ್ನು ಮಾತ್ರ ನಾನು ನಂಬುತ್ತೇನೆ. ಆದುದರಿಂದಲೇ ಜನತೆಯ ಅಖಂಡತೆಯಲ್ಲೂ ನನಗೆ ಶ್ರದ್ಧೆ ಇರುವುದು. ಒಬ್ಬನು ಮಾತ್ರ ಆಧ್ಯಾತ್ಮ ಲಾಭ ಪಡೆದು ಅವನ ಸುತ್ತಣ ಜನರು ತೊಳಲುತ್ತಾರೆ ಎಂಬುದನ್ನು ನಾನು ನಂಬುವುದಿಲ್ಲ. ಅದ್ವೈತದಲ್ಲಿ ನನಗೆ ಶ್ರದ್ಧೆ ಇದೆ. ತತ್ವಶಃ ಮಾನವನ ಅಖಂಡತೆಯಲ್ಲಿ, ಹಾಗೆ ನೋಡಿದರೆ ಜೀವಸಮಸ್ತದ ಅಖಂಡತೆಯಲ್ಲಿ ನನಗೆ ವಿಶ್ವಾಸವುಂಟು. ಆದುದರಿಂದಲೇ ಒಂದು ವ್ಯಕ್ತಿಗೆ ಆಧ್ಯಾತ್ಮ ಲಾಭವಾದರೆ ಇಡೀ ವಿಶ್ವಕ್ಕೆ ಆ ಲಾಭ ಒದಗುತ್ತದೆ. ಒಂದು ವ್ಯಕ್ತಿ ಪತನ ಹೊಂದಿದರೆ ಅಷ್ಟರಮಟ್ಟಿಗೆ ಇಡೀ ವಿಶ್ವದ ಪತನವೇ ಆಗುತ್ತದೆ ಎಂದು ನಾನು ಭಾವಿಸಿರುವುದು" (ಯಂಗ್ ಇಂಡಿಯಾ).

### ಭಾರತೀಯ ಚಿಂತನಾ ಪರಂಪರೆಯಲ್ಲಿನ ದೌರ್ಬಲ್ಯ

ಭಾರತೀಯ ಚಿಂತನಾ ಪರಂಪರೆಯಲ್ಲಿ ಕಂಡುಬರುವ ಎಲ್ಲ ದೌರ್ಬಲ್ಯಗಳನ್ನು ಸ್ವಾಮಿ ವಿವೇಕಾನಂದರು ತೀವ್ರವಾಗಿ ಖಂಡಿಸಿದ್ದಾರೆ. ಈ ದೌರ್ಬಲ್ಯಗಳು ನಮ್ಮ ಬದುಕನ್ನು ಹಾಳು ಮಾಡಿರುವುದನ್ನು ಸ್ಪಷ್ಟವಾಗಿ ತೋರಿಸುತ್ತಾರೆ. ನಮ್ಮ ಪರಂಪರಾನುಗತ ಚಿಂತನೆಯಲ್ಲಿ ವಾಸ್ತವದಿಂದ ಅತೀತಕ್ಕೆ, ಮೂರ್ತದಿಂದ ಅಮೂರ್ತಕ್ಕೆ ಕೊಂಡೊಯ್ಯುವ ಒಂದು ಬಗೆಯ ಅಭೌತಿಕ ನಂಬಿಕೆ ನಮ್ಮ ಬದುಕು-ಭಾವನೆಗಳನ್ನು ಇಂದಿಗೂ ನಿಯಂತ್ರಿಸುತ್ತಿದೆ. ಈ ಬಗೆಯ ಚಿಂತನೆಗೆ ಸಹಸ್ರಮಾನಗಳ ಇತಿಹಾಸವೇ ಇದೆ. ನಮ್ಮ ಕಣ್ಣೆದುರಿಗೆ ನಮ್ಮೊಡನೆ ಇರುವವರ ದುಃಖ, ಕಷ್ಟ-ಕಾರ್ಪಣ್ಯಗಳು ಅವರವರ ಕರ್ಮಫಲದಿಂದ ಉಂಟಾಗಿದೆ ಎಂದು ಭಾವಿಸಿ ಆ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದಿರುವ ಕಲೆಯನ್ನು ನಾವು ಕರಗತ ಮಾಡಿಕೊಂಡಿದ್ದೇವೆ. ಪ್ರತಿಯೊಬ್ಬನೂ ತನ್ನ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಾಗಲೂ ಈ ಅಭೌತಿಕ ನಂಬಿಕೆಯ ಸೆಳೆತಕ್ಕೆ ಸಿಕ್ಕಿ ಇಲ್ಲದ ತೊಡಕುಗಳಿಂದ ನರಳುತ್ತಾನೆ. ನಮ್ಮ ಯಃಕಶ್ಚಿತ್ ಲೌಕಿಕ ಸಮಸ್ಯೆಗಳೂ ಸಹ ಕೇವಲ ಅಭೌತಿಕ ನೆಲೆಗಳಲ್ಲಿ ಪವಾಡ ಸದೃಶವಾಗಿ ಪರಿಹಾರವಾಗುತ್ತದೆಂಬ ನಂಬಿಕೆ ನಮ್ಮ ಜನಸಾಮಾನ್ಯರ ಚಿಂತನೆಯಲ್ಲಿ ಹಾಸುಹೊಕ್ಕಾಗಿ ಸೇರಿಹೋಗಿದೆ. ಕ್ರಿಯಾಶೀಲತೆಯಿಂದ ನಮ್ಮ ಲೌಕಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕೆಂಬ ಔಚಿತ್ಯಜ್ಞಾನ ನಮ್ಮ ಸಾಂಸ್ಕೃತಿಕ ಚಿಂತನೆಯಲ್ಲಿ ಅಲ್ಲಲ್ಲಿ ಸಿಕ್ಕರೂ ಎಲ್ಲಕ್ಕೂ ದೈವಸಹಾಯಕ್ಕಾಗಿ ಕಾದು ಕುಳಿತುಕೊಳ್ಳುವ ಒಂದು ಬಗೆಯ ಅಭೌತಿಕ ಅವಲಂಬನೆ ನಮ್ಮ ಚಿಂತನೆಯಿಂದ ದೂರವಾಗಲೇ ಇಲ್ಲ. ಇದಕ್ಕೆಂದೇ ಕಾಣುತ್ತದೆ ಸ್ವಾಮಿ ವಿವೇಕಾನಂದರು ಸಿಟ್ಟುಗೊಂಡು ಹೇಳಿದ್ದು—"ಭಾರತದ ಕೋಟ್ಯಂತರ ಜನ ಅನೇಕ ಕೋಟಿ ದೇವತೆಗಳ ಸಹಾಯಕ್ಕಾಗಿ ಕಾದು ಕಾದು ನಾಯಿಗಳಂತೆ ಜೀವನ ನಡೆಸುತ್ತಿದ್ದಾರೆ... ಕ್ರಿಯಾಶೀಲನಾಗಿ ಜಯಗಳಿಸಿದ ವ್ಯಕ್ತಿಯನ್ನು ದೇವತೆಗಳೂ ಹಿಂಬಾಲಿಸುತ್ತಾರೆ." ಎಂದು.

**ಅನಿತ್ಯದ ಕಲ್ಪನೆಯನ್ನು ಸಾಧಕನಾದವನು ತನ್ನ ಅಂತರಂಗದಲ್ಲಿ ಸಾಧನೆಯ ಉಪಕರಣವಾಗಿ ಬಳಸಬೇಕೇ ಹೊರತು ವಾಚ್ಯವಾಗಿ ಭೌತಿಕ ಜಗತ್ತಿಗೆ ಅನ್ವಯಿಸಬಾರದು.**

ಯೋಗವಾಸಿಷ್ಠ, ಗೀತೆಯ ಸಂದೇಶಗಳು ಮನುಷ್ಯ ತನ್ನ ಭವಿಷ್ಯವನ್ನು ತಾನೇ ನಿರ್ಮಾಣ ಮಾಡುತ್ತಾನೆಂದು ಸ್ಪಷ್ಟವಾಗಿ ತಿಳಿಸುತ್ತವೆ. ಯೋಗವಾಸಿಷ್ಠವಂತೂ "ದೈವೇಚ್ಛೆ" ಎಂಬ ಕಲ್ಪನೆ ಹೇಡಿಗಳ, ದುರ್ಬಲರ ಚಿಂತನೆ ಎಂದೂ, ಮನುಷ್ಯ ಕ್ರಿಯಾಶೀಲನಾಗಿ ಕಾರ್ಯಪ್ರವೃತ್ತನಾಗಬೇಕೆಂದೂ ಪುರುಷಾರ್ಥವೇ ಸರ್ವಸಿದ್ಧಿಗಳ ಸೋಪಾನ ಎಂದೂ ತಿಳಿಸುತ್ತದೆ. ಆದರೆ ಈ ಸಂದೇಶ ನಮ್ಮ ದೇಶದ ಕ್ರಿಯಾಶೀಲತೆಯನ್ನು ಸ್ವಲ್ಪವೂ ಹೆಚ್ಚಿಸಿದ ಹಾಗೆ ಕಾಣುತ್ತಿಲ್ಲ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ "ನಾವು ದುರ್ಬಲರಾಗಿದ್ದೇವೆ. ಆದ್ದರಿಂದಲೇ ಮಾಂತ್ರಿಕವಿದ್ಯೆ, ರಹಸ್ಯವಿದ್ಯೆ ಮುಂತಾದವುಗಳಿಗೆ ಬಲಿಯಾಗುತ್ತೇವೆ. ಅವುಗಳಲ್ಲಿ ಸತ್ಯವಿರಬಹುದು. ಆದರೆ ಅವು ನಮ್ಮನ್ನು ಬಹುಪಾಲು ನಾಶಗೊಳಿಸಿವೆ."

## ಅನಿತ್ಯದ ಕಲ್ಪನೆಯ ಅವಾಂತರ

ಇಹದ ಸುಖಗಳನ್ನು ತ್ಯಜಿಸಿ ಸತ್ಯಾನ್ವೇಷಣೆ ಮಾಡುವ ಸಾಧಕರು ತಮ್ಮ ತ್ಯಾಗಕ್ಕೆ ನೀಡುವ ಮೊಟ್ಟ ಮೊದಲ ಕಾರಣ ಇದು "ಅನಿತ್ಯ" ಎಂಬುದು. ಜೊತೆಗೆ ಜೀವನದ ಅನಿವಾರ್ಯ ದುಃಖಗಳನ್ನು ಪಟ್ಟಿಮಾಡುತ್ತಾರೆ. ಇಂತಹ ಸಾಧಕರು ತಮ್ಮ ಜೀವನವನ್ನು ಲಘುವಾಗಿ ಪರಿಗಣಿಸುವುದಿಲ್ಲ. ತಮ್ಮ ಗುರಿಸಾಧನೆಗೆ ಗಂಭೀರ ಪ್ರಯತ್ನ ಮಾಡುತ್ತಾರೆ ನಿಜ. ಆದರೆ "ಅನಿತ್ಯ"ದ ಕಲ್ಪನೆ ನಮ್ಮ ಮನಸ್ಸಿನ ಆಳಕ್ಕೆ ಹೋದಂತೆಲ್ಲ ಈ ಭೌತಿಕ ಜಗತ್ತಿನ ಆಗು-ಹೋಗುಗಳ ಬಗ್ಗೆ ಅಸಡ್ಡೆ ಬರುತ್ತದೆ. ತನ್ನ ಮೂಲಭೂತ ಅವಶ್ಯಕತೆಗಳಿಗಾದರೂ ಕ್ರಿಯಾಶೀಲನಾಗಬೇಕಾದ ಅನಿವಾರ್ಯತೆಯನ್ನೂ ಸಹ ಅವನು ಮರೆಮಾಚಬಹುದು. ಆದ್ದರಿಂದ ಅವನು ತನ್ನ ಭೌತಿಕ ಆವಶ್ಯಕತೆಗಳಿಗಾಗಿ ಸಮಾಜದ ಇತರರ ದುಡಿಮೆಯನ್ನು ಅವಲಂಬಿಸುತ್ತಾನೆ. ಅಲ್ಲದೆ ಅವನು ಸಮಾಜದಲ್ಲಿ ಗೌರವಯುತವಾದ ಸ್ಥಾನವನ್ನು ಅಲಂಕರಿಸುವುದರಿಂದ ಈ ಬಗೆಯ ಲೌಕಿಕ ತಾತ್ಸಾರದ ಮೇಲ್ಪಂಕ್ತಿಯನ್ನು ಜನಸಾಮಾನ್ಯರಿಗೆ ತನ್ನ ಆಚರಣೆಯ ಮೂಲಕ ತೋರಿಸಿಕೊಡುತ್ತಾನೆ. ಆದರೆ ಗೀತೆಯ ಮುಖ್ಯಪುರುಷ ಕೃಷ್ಣ ಹೇಳುತ್ತಾನೆ—"ಅರ್ಜುನ, ನಾನೇ ಕೆಲಸ ಮಾಡದಿದ್ದರೆ ಲೋಕಗಳೆಲ್ಲ ನಿಷ್ಕ್ರಿಯವಾದೀತು. ಆದ್ದರಿಂದ ನಾನು ಕೆಲಸ ಮಾಡುತ್ತೇನೆ." ಹೀಗೆ ಶ್ರೀಕೃಷ್ಣನು ಕ್ರಿಯಾಶೀಲತೆಯ ಮೇಲ್ಪಂಕ್ತಿಯನ್ನು ಹಾಕಿಕೊಡುತ್ತಾನೆ. ಶ್ರೀರಾಮಕೃಷ್ಣರ ಅಂತರಂಗ ಶಿಷ್ಯ ಸ್ವಾಮಿ ತುರೀಯಾನಂದರು ತಾವು ದೇಹ ಬಿಡುವ ಸಂದರ್ಭದಲ್ಲಿ ನುಡಿದ ಕೊನೆಯ ವಾಕ್ಯವನ್ನು ನಾವು ಬುದ್ಧಿಪೂರ್ವಕವಾಗಿ ಗಮನಿಸಬೇಕು. ಅವರು ಹೇಳಿದರು "ಬ್ರಹ್ಮವೂ ಸತ್ಯ, ಈ ಜಗತ್ತೂ ಸತ್ಯ" ಎಂದು. ಅನಿತ್ಯದ ಕಲ್ಪನೆಯನ್ನು ಸಾಧಕನಾದವನು ತನ್ನ ಅಂತರಂಗದಲ್ಲಿ ಸಾಧನೆಯ ಉಪಕರಣವಾಗಿ ಬಳಸಬೇಕೇ ಹೊರತು ವಾಚ್ಯವಾಗಿ ಭೌತಿಕ ಜಗತ್ತಿಗೆ ಅನ್ವಯಿಸಬಾರದು.

ಈ ಸಂದರ್ಭದಲ್ಲಿ "ಅನಿತ್ಯ"ದ ಕಲ್ಪನೆಯನ್ನು ಅತಿಯಾಗಿ ಆಚರಿಸುತ್ತಿದ್ದ ಬೌದ್ಧ ಮಠಗಳ ಸಂಗತಿಯೊಂದು ಸ್ವಾರಸ್ಯಕರವಾಗಿದೆ. ೯ರ್ದ ೯ನೇ ಶತಮಾನದಲ್ಲಿ ಚೈನಾದೇಶದಲ್ಲಿ ನಡೆದ ಘಟನೆ. ಆಗ ಚೈನಾದ ತುಂಬ ಬೌದ್ಧ ಸಂನ್ಯಾಸಿಗೃಹಗಳೇ ತುಂಬಿ ಹೋಗಿದ್ದವು. ಇವರಲ್ಲಿ ಬಹುತೇಕ ಸಂನ್ಯಾಸಿಗಳು ಧಮ್ಮಪದ ಮುಂತಾದ ಬೌದ್ಧಶಾಸ್ತ್ರಗ್ರಂಥಗಳನ್ನು ಪಠಣ ಮಾಡುತ್ತಿದ್ದರು. ಇವರಲ್ಲಿ "ಜೆನ್" ಮಾರ್ಗ ಅನುಸರಿಸುತ್ತಿದ್ದವರು ಎಲ್ಲೋ ಕೆಲವರು. ಆಗ ದೇಶದ ದೊರೆ ಭಾವಿಸಿದ—ಈ ದೇಶದಲ್ಲಿ ೪೪,೬೦೦ ಬೌದ್ಧಸಂನ್ಯಾಸಿ ಆಶ್ರಮಗಳು ಮತ್ತು ಅಲ್ಲಿಯ ೩ ಲಕ್ಷಕ್ಕೂ ಮಿಗಿಲಾದ ಬೌದ್ಧ ಸಂನ್ಯಾಸಿಗಳು ಕುಳಿತು ಊಟ ಮಾಡುತ್ತಿದ್ದಾರೆ, ದುಡಿದು ಬೆಳೆಯದೆ ಅನ್ನ ಊಟ ಮಾಡುತ್ತಿದ್ದಾರೆ, ಬಟ್ಟೆ ನೇಯದೆ ಬಟ್ಟೆ ಧರಿಸುತ್ತಿದ್ದಾರೆ. ಆದ್ದರಿಂದ ದೇಶದ ಮತ್ತೊಂದು ಕಡೆ ಜನ ಹಸಿವಿನಿಂದ ನಿರ್ವಸ್ತ್ರರಾಗಿ ಬಳಲುತ್ತಿದ್ದಾರೆ. ಹೀಗೆ ಹೇಳಿ ಅವನು ಬೌದ್ಧ ಆಶ್ರಮಗಳನ್ನೆಲ್ಲ ನಾಶ ಮಾಡಿಸಿದ. ಬೌದ್ಧ ಸಂನ್ಯಾಸಿಗಳನ್ನೆಲ್ಲ ದಿನನಿತ್ಯದ ಗೃಹ ಕೃತ್ಯಕ್ಕೆ ಕಳುಹಿಸಿಬಿಟ್ಟ. ಆದರೆ "ಜೆನ್"ವಿಧಾನ ಅನುಸರಿಸುತ್ತಿದ್ದ ಭಿಕ್ಷುಗಳಿಗೆ ಇದರಿಂದ ಯಾವ ಅನಾನುಕೂಲವೂ ಆಗಲಿಲ್ಲ. ಏಕೆಂದರೆ ಅವರಿಗೆ ದೈನಂದಿನ ಗೃಹ ಕೃತ್ಯಗಳು ಸಾಧನೆಗೆ ಅಡಚಣೆ ಆಗಿರಲಿಲ್ಲ. ಅವರಿಗೆ ಬಾವಿಯಿಂದ ನೀರು ಸೇದಲು, ಹೊಲ ಉಳಲು ಬರುತ್ತಿತ್ತು. ಈ ಗೃಹಕೃತ್ಯಗಳ ನಡುವೆಯೂ ಅವರು ತಮ್ಮ ಸಾಧನೆಯನ್ನು ಮುಂದುವರೆಸು ತ್ತಿದ್ದರು. ತಾನೊಬ್ಬ ವಿಶಿಷ್ಟ ವ್ಯಕ್ತಿ, ತನಗೆ ಉಳಿದವರು ತಲೆಬಾಗ ಬೇಕು ಇವೇ ಮುಂತಾದ ಭಾವನೆಗಳು ಅವರಿಗೆ ಬರಲೇ ಇಲ್ಲ.

> ತನ್ನ ಸ್ವಂತಸುಖವನ್ನು ನೋಡಿಕೊಳ್ಳುತ್ತ ಯಾರು ಸ್ವಾರ್ಥಪರರಾಗಿ ಸೋಮಾರಿಗಳಾಗಿ ಕಾಲ ಕಳೆಯುತ್ತಿರುವರೊ ಅವರಿಗೆ ನರಕದಲ್ಲಿಯೂ ಸ್ಥಳವಿಲ್ಲ.
>
> —ಸ್ವಾಮಿ ವಿವೇಕಾನಂದ

ಮೇಲಿನ ಘಟನೆ "ಇಲ್ಲಿ ಸಲ್ಲುವವರು ಮಾತ್ರ ಅಲ್ಲಿ ಸಲ್ಲುವರು" ಎಂಬ ಮಾತನ್ನು ಹೇಗೆ ಸ್ಪಷ್ಟಪಡಿಸುತ್ತದೆ ಎಂಬುದನ್ನು ನೋಡಿ! ಶರಣರ "ಕಾಯಕ ತತ್ತ್ವ" ಭಾರತೀಯ ಪರಂಪರಾನುಗತ ಚಿಂತನಾದೌರ್ಬಲ್ಯಕ್ಕೆ ಕೊಟ್ಟ ಒಂದು ಔಷಧಿ. ಶರಣರ ವಚನ ಸಂದೇಶ, ಮುಖ್ಯವಾಗಿ "ಕಾಯಕ ತತ್ತ್ವ" ವೇನಾದರೂ ಸ್ವಾಮಿ ವಿವೇಕಾನಂದರ ಗಮನಕ್ಕೆ ಬಂದಿದ್ದರೆ ಅವರು ಭಾವಪರವಶರಾಗಿ ರೋಮಾಂಚನಗೊಳ್ಳುತ್ತಿದ್ದರು ಎಂಬುದರಲ್ಲಿ ಸಂಶಯವೇ ಇಲ್ಲ, ಶರಣರ ಕಾಯಕ ತತ್ತ್ವವನ್ನು ಇಡೀ ದೇಶದ ಆದರ್ಶವನ್ನಾಗಿ ಸಾರಿಬಿಡುತ್ತಿದ್ದರು.

## ಆತ್ಮೋನ್ನತಿ ಮತ್ತು ಜಗದ್ಧಿತ

ನವಭಾರತ ನಿರ್ಮಾಣ ನಿಜವಾದ ಕ್ಷಾತ್ರವುಳ್ಳ, ಕಾರ್ಯ ಸಾಧಿಸುವ ಛಾತಿಯುಳ್ಳ ತ್ಯಾಗಿಗಳಿಂದಷ್ಟೇ ಸಾಧ್ಯವೆಂದು ಸ್ವಾಮೀಜಿ ಕಂಡುಕೊಂಡರು. ಆದರೆ ತ್ಯಾಗಜೀವನ ನಡೆಸುವ ಯುವ ಜನಾಂಗದ ಮುಂದೆ ಮೊದಲು ನಿಲ್ಲಬಹುದಾದ ಆದರ್ಶ "ಸಾಕ್ಷಾತ್ಕಾರ," ಎಂದರೆ ಈ ಎಲ್ಲ ಅಸ್ತಿತ್ವಕ್ಕೂ ಕಾರಣವಾದ ಪರಮ ಸತ್ಯವನ್ನು ಅನುಭವಿಸಿ ನೋಡುವುದು. ಇಂತಹ ಯುವಕರು ದೇಶದ ಸಮಸ್ಯೆಗೆ ಸ್ಪಂದಿಸದೆ ಕೇವಲ ತಮ್ಮ ಸತ್ಯಾನ್ವೇಷಣೆಯಲ್ಲಿ ತೊಡಗಿದರೆ ಅವರು ಲೌಕಿಕ, ಅಲೌಕಿಕಗಳೆರಡನ್ನೂ ಕಳೆದುಕೊಳ್ಳಬಹುದು. ಆದ್ದರಿಂದ ಸ್ವಾಮೀಜಿಯವರು ಒಂದು ಧ್ಯೇಯವಾಕ್ಯವನ್ನು ಮುಂದಿಟ್ಟರು. ಅದೇ **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ.** ಈ ವಾಕ್ಯದ ಹಿಂದೆ ವ್ಯಷ್ಟಿ-ಸಮಷ್ಟಿಗಳೆರಡರ ಸಮನ್ವಯವನ್ನು ಕಾಣುತ್ತೇವೆ.

ವ್ಯಕ್ತಿಯೊಬ್ಬ ತನ್ನನ್ನು ತಾನೇ ಬಂಧನಗಳಿಂದ ಹೇಗೆ ಬಿಡಿಸಿಕೊಳ್ಳಬಲ್ಲ? ಆ ಪ್ರಕ್ರಿಯೆ ಸಮಷ್ಟಿಯ ಉನ್ನತಿಯೂ ಆಗಿರಬೇಕು.

ಸಮಷ್ಟಿಯ ಒಳಿತು-ಕೆಡುಕುಗಳಿಗೆ ಸ್ವಲ್ಪವೂ ಸಂಬಂಧಪಡದ ವ್ಯಕ್ತಿ-ವಿಕಾಸ ಏನಿದ್ದರೂ ಒಂದು ಸ್ವಾರ್ಥವೇ ಸರಿ. ಸ್ವಾಮಿ ವಿವೇಕಾನಂದರಿಗೂ ಚಿಕ್ಕ ವಯಸ್ಸಿನಲ್ಲಿ ಈ ಬಗೆಯ ತಾಕಲಾಟ ಬಂದಿತ್ತು. ಅವರು ಶ್ರೀರಾಮಕೃಷ್ಣರನ್ನು ಕೇಳಿಕೊಂಡರು: "ನಾನು ನಿರಂತರ ಸಮಾಧಿಯ ಆನಂದದಲ್ಲಿ ಯಾವುದಾದರೂ ಗಿರಿ-ಗಹ್ವರದಲ್ಲಿ ವಾಸಿಸುವ ಯೋಚನೆ ಮಾಡುತ್ತಿದ್ದೇನೆ." ಆಗ ಶ್ರೀರಾಮಕೃಷ್ಣರು ಛೇಡಿಸಿದರು: "ನಿನ್ನದು ಎಂತಹ ಹೀನ ಬುದ್ಧಿ. ಪ್ರಪಂಚದಲ್ಲಿ ಎಷ್ಟೊಂದು ದುಃಖವಿದೆ, ಅದರ ಬಗ್ಗೆ ಸ್ವಲ್ಪವೂ ಗಮನವಿಲ್ಲವೆ ಸ್ವಾರ್ಥಿಯಂತೆ ಯೋಚಿಸುತ್ತಿದ್ದೀಯ!" ಶ್ರೀರಾಮಕೃಷ್ಣರು ಸದಾ ನಿರ್ವಿಕಲ್ಪ ಸಮಾಧಿಯಲ್ಲಿ ಇರುವ ಸಾಮರ್ಥ್ಯವನ್ನು ಹೊಂದಿದ್ದರೂ ವಿವೇಕಾನಂದರಿಗೆ ಈ ಮಾತನ್ನೇಕೆ ಹೇಳಿದರು? ಏಕೆಂದರೆ ನಿಜವಾದ ಮೋಕ್ಷ ಅಥವಾ ಬಿಡುಗಡೆ ಎಂಬುದು ಸಮಷ್ಟಿ ಪ್ರಜ್ಞೆಯಲ್ಲಿ, ಸಮಷ್ಟಿಯ ಎಲ್ಲ ವಾಸ್ತವತೆಗಳನ್ನು ಅಂಗೀಕರಿಸಿ ಪಡೆಯಬಹುದಾದ ಸಹಜ ಸ್ಥಿತಿಯಲ್ಲಿ.ಆದ್ದರಿಂದಲೇ ಸಾಧಕ "ಇದಲ್ಲ" "ಇದಲ್ಲ" ಎಂದು ನಿರಾಕರಿಸಿ, ಅನಂತರ ಎಲ್ಲವನ್ನೂ ಅಂಗೀಕರಿಸುತ್ತಾನೆ—ಆದರೆ ಹೊಸ ಪ್ರಜ್ಞೆಯಲ್ಲಿ.

## ಹೊಸದೃಷ್ಟಿ, ಅಗತ್ಯ

ಶ್ರೀರಾಮಕೃಷ್ಣರ ಬೇಲದ ಹಣ್ಣಿನ ಉದಾಹರಣೆಯೂ ಸಹ ಇದನ್ನು ಪುಷ್ಟೀಕರಿಸುತ್ತದೆ. ಅವರು ಹೇಳುತ್ತಿದ್ದರು : ನಮಗೆ ಬೇಲದ ಹಣ್ಣಿನ ತೂಕ ಬೇಕಾದರೆ ಬೇಲದ ಹಣ್ಣಿನ ತಿರುಳು ಮಾತ್ರ ಸಾರವಾದದ್ದು ಎಂದು ಕರಟ ಮತ್ತು ಬೀಜಗಳನ್ನು ತೆಗೆದುಹಾಕಿ ತಿರುಳನ್ನು ತೂಗಿದರೆ ತೂಕ ಕಡಿಮೆ ಬಂದು ಬಿಡುತ್ತದೆ. ಆದರೆ ಬೀಜ ಮತ್ತು ಕರಟ ತಿರುಳಿಗೆ ಸೇರಿದ್ದು. ಆದ್ದರಿಂದ ಅವನ್ನೆಲ್ಲ ಸೇರಿಸಿ ತೂಗಿದರೆ ಮಾತ್ರ ಬೇಲದ ಹಣ್ಣಿನ ತೂಕ ಸರಿಯಾಗಿಬಿಡುತ್ತದೆ. ಆದ್ದರಿಂದ ಸಮಷ್ಟಿಯಲ್ಲಿ ಯಾವುದನ್ನೆಲ್ಲ ನಾವು ಅಮುಖ್ಯ ಎಂದು ತಿರಸ್ಕರಿಸುತ್ತೇವೋ ಅದೆಲ್ಲವನ್ನೂ ಅಂಗೀಕರಿಸಿದಾಗ ಮಾತ್ರ ಪರಿಪೂರ್ಣತೆಯ ಜ್ಞಾನ ಪಡೆಯಲು ಸಾಧ್ಯ. ಸಮಷ್ಟಿಯ ಸರ್ವಸ್ವವನ್ನೂ ನಾವು ಅಂಗೀಕರಿಸಿದ್ದೇವೆ ಎಂದು ಹೇಳಬೇಕಾದರೆ ನಮಗೆ ಹೊಸದೊಂದು ನಿರ್ಲಿಪ್ತ ದೃಷ್ಟಿಯ ಆವಿಷ್ಕಾರ ಆಗಲೇಬೇಕು. ಇಲ್ಲದಿದ್ದರೆ "ಅಂಗೀಕರಿಸಿದ್ದೇವೆ" ಎಂದು ಹೇಳಲಾಗುವುದಿಲ್ಲ. ಬದಲಾಗಿ "ಆರಿಸಿಕೊಂಡಿದ್ದೇವೆ" ಎಂದು ಹೇಳಬೇಕಾಗುತ್ತದೆ. ಸಾಧಾರಣವಾಗಿ ಬದುಕುವ ಎಲ್ಲರೂ ಸಮಷ್ಟಿಯನ್ನು ಸಮಗ್ರವಾಗಿ ಅಂಗೀಕರಿಸಲಾರರು. ತಮಗೆ ಹಿತ ನೀಡುವ, ಮುದ ನೀಡುವ ಅಂಶಗಳನ್ನು ಮಾತ್ರ ಆರಿಸಿಕೊಂಡುಬಿಡುತ್ತಾರೆ. ಸಮಗ್ರ ಅಂಗೀಕರಣಕ್ಕೆ ಹೊಸದೊಂದು ದೃಷ್ಟಿ, ಹೊಸದೊಂದು ಮನಸ್ಸಿನ ಆಯಾಮ ಮೂಡಬೇಕು. ಅದಕ್ಕೆ ಸಾಧನೆಯ ಆವಶ್ಯಕತೆ ಇದೆ.

ಸ್ವಾಮಿ ವಿವೇಕಾನಂದರು ನಮ್ಮ ಭಾರತೀಯ ಸಂಸ್ಕೃತಿಯ ಕ್ರಿಯಾಶೀಲ ಪ್ರತಿನಿಧಿಯಾಗಿ ನಮ್ಮ ಮುಂದೆ ನಿಲ್ಲುತ್ತಾರೆ. ನಮ್ಮ ಸಂಸ್ಕೃತಿಯ ದೌರ್ಬಲ್ಯಗಳನ್ನೆಲ್ಲ ನಿವಾರಿಸುವ ಆತ್ಮಸ್ಥೈರ್ಯದ ಮಾದರಿಯಾಗಿದ್ದಾರೆ. ನಮ್ಮ ಚಿಂತನೆಯ ಶಕ್ತಿಮೂಲಗಳನ್ನು ನಮ್ಮೆದುರು ತೆರೆದಿಡುತ್ತಾರೆ. ಅವರಲ್ಲಿ ಎಲ್ಲವೂ ಸಕಾರಾತ್ಮಕವೇ! ನನ್ನ ಅಸ್ತಿತ್ವ ನನ್ನ ದೇಹಕ್ಕಷ್ಟೆ ಸೀಮಿತವಲ್ಲ ಎನ್ನುತ್ತಾರೆ ಸ್ವಾಮೀಜಿ. ನನ್ನ ದೇಹಾಂತ್ಯದ ನಂತರವೂ ನಾನು ನನ್ನ ಕೆಲಸವನ್ನು ಮುಂದುವರೆಸುತ್ತೇನೆ ಎನ್ನುವ ಅದಮ್ಯಶಕ್ತಿ ಅವರದು. ಶ್ರೀರಾಮಕೃಷ್ಣರ ಅವತಾರ ಸಂದೇಶವನ್ನು ಪೂರ್ಣಪ್ರಮಾಣದಲ್ಲಿ ಸಫಲ ಮಾಡಿದವರು ಅವರು. ಬಹುಶಃ ನವಭಾರತ ನಿರ್ಮಾಣದಲ್ಲಿ ತೊಡಗಿರುವ ಎಲ್ಲ ರೂವಾರಿಗಳೂ ಅವರಿಂದ ಪ್ರೇರಣೆ ಪಡೆದವರೇ. ಅವರ ದೇಹತ್ಯಾಗದ ನೂರುವರ್ಷದ ನಂತರವೂ ಅವರ ಸ್ಫೂರ್ತಿವಾಣಿ ನಮ್ಮೆಲ್ಲರ ಮುಖಾಂತರ ಕೆಲಸ ಮಾಡುತ್ತಿದೆ. ಅವರ ದಿವ್ಯಸ್ಮರಣೆ ನಮಗೆಲ್ಲ ಮತ್ತಷ್ಟು ಸ್ಫೂರ್ತಿ ನೀಡಲಿ.

## ಪತಿತೋದ್ಧಾರ

ಸ್ವಾಮೀಜಿ ಅಮೆರಿಕದಲ್ಲಿದ್ದಾಗಲೇ ನಾಲ್ವರು ಬ್ರಹ್ಮಚಾರಿಗಳು ಕಲ್ಕತ್ತೆಯಲ್ಲಿನ ರಾಮಕೃಷ್ಣ ಮಠಕ್ಕೆ ಸೇರಿಕೊಂಡಿದ್ದರು. ಇತರ ಹಿರಿಯ ಸಂನ್ಯಾಸಿಗಳಿಂದ ಅನೇಕ ವರ್ಷಗಳ ಕಾಲ ಅವರು ಆಧ್ಯಾತ್ಮಿಕ ಶಿಕ್ಷಣವನ್ನು ಪಡೆದಿದ್ದರು. ಸ್ವಾಮೀಜಿಯವರಿಂದಲೇ ಸಂನ್ಯಾಸ ಸ್ವೀಕರಿಸಬೇಕೆಂಬುದು ಅವರ ಬಯಕೆಯಾಗಿತ್ತು. ಅವರೆಲ್ಲ ಅದಕ್ಕೆ ತಕ್ಕ ಅರ್ಹತೆ ಪಡೆದಿರುವುದನ್ನು ಗಮನಿಸಿ ಸ್ವಾಮೀಜಿ, ಅವರಿಗೆ ಸಂನ್ಯಾಸ ನೀಡಲು ಒಪ್ಪಿಕೊಂಡರು.

ಆದರೆ ಆ ನಾಲ್ವರ ಪೈಕಿ ಒಬ್ಬನಿಗೆ ಮಾತ್ರ ಸಂನ್ಯಾಸ ಕೊಡಕೂಡದೆಂದೂ ಆತನ ಹಿಂದಿನ ಚರಿತ್ರೆ ಚೆನ್ನಾಗಿಲ್ಲವೆಂದೂ ಹಿರಿಯ ಸಂನ್ಯಾಸಿಗಳು ಸ್ವಾಮೀಜಿಗೆ ಹೇಳಿದರು. ಆ ಮಾತಿಗೆ ಸ್ವಾಮೀಜಿ ವ್ಯಗ್ರರಾಗಿ—"ಏನಿದೆಲ್ಲ? ಪತಿತರನ್ನು ನಾವೇ ದೂರ ಮಾಡಿದರೆ ಹೇಗೆ? ಅವರನ್ನು ಕಾಪಾಡುವವರಾರು? ಅಲ್ಲದೆ ಒಬ್ಬ ಮನುಷ್ಯ ತಾನು ಇನ್ನು ಮುಂದೆ ಉತ್ತಮ ಜೀವನ ನಡೆಸಬೇಕೆಂಬ ಇಚ್ಛೆಯಿಂದ ಈ ಮಠಕ್ಕೆ ಸೇರಬೇಕೆಂದು ಬಂದಾಗಲೇ ಅವನ ಉದ್ದೇಶ ಒಳ್ಳೆಯದಾಗಿದೆಯೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ನಾವು ಅವನ ಉದ್ಧಾರಕ್ಕೆ ನೆರವಾಗಲೇಬೇಕು. ಒಂದು ವೇಳೆ ಅವನ ಶೀಲ ಚೆನ್ನಾಗಿರದಿದ್ದರೆ ಅವನನ್ನು ತಿದ್ದಿ ಪರಿವರ್ತನಗೊಳಿಸಲು ನಿಮಗೆ ಸಾಧ್ಯವಿಲ್ಲವೆ? ಸಾಧ್ಯವಿಲ್ಲದಿದ್ದರೆ ನೀವು ಈ ಗುರುಸ್ಥಾನಕ್ಕೆ ಬಂದದ್ದಾದರೂ ಯಾಕೆ?" ಹೀಗೆ ಸ್ವಾಮೀಜಿ ನುಡಿದು ಆ ಶಿಷ್ಯನ ಸಂಪೂರ್ಣ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡರು.

ಸ್ಥಳದಾನ: ಎಸ್ಕೆ ಇಂಡಸ್ಟ್ರೀಸ್, ಬೆಂಗಳೂರು